ರೀಹ್ಯಾಬಿಲಿಟೇಷನ್ ಸಲುವಾಗಿ ಕೇವಲ ಒಂದು ಕೋಟಿ ರೂಪಾಯಿ ಒದಗಿಸುತ್ತಿದ್ದರು. ಆದರೆ ಅದನ್ನು ಅವರು ಹೆಚ್ಚು ಮಾಡಬೇಕು. ಏಕೆಂದರೆ ಈಗಾಗಲೇ ಕರ್ನಾಟಕ ಸರ್ಕಾರದವರು ಕೆಲವು ಮೆಲ್ಲುಗಳನ್ನು ತೆಗೆದುಕೊಂಡಿದ್ದಾರೆ. ಅವರು ಹೆಚ್ಚು ಮಾಡದೆ ಹೋದರೆ ತಮ್ಮ ಲಿಮಿಟ್ ಬದಲಾವಣೆ ಮಾಡದಿದ್ದರೆ ನಮಗೆ ಅನುಕೂಲ ಆಗುವುದಿಲ್ಲವೆಂದು ಅದನ್ನು ಹೆಚ್ಚು ಮಾಡಬೇಕೆಂದು ಸಂಬಂಧಪಟ್ಟ ಮಂತ್ರಿಗಳಿಗೆ ಮನವಿ ಮಾಡಿಕೊಂಡಿದ್ದೆವು. ಅವರು ಲಿಮಿಟ್ 2 ಕೋಟಿ ರೂಪಾಯಿ ಮಾಡುವುದಕ್ಕೆ ಎನ್‌ಸಿಡಿಸಿ ಎಕ್ಸಿಕ್ಯೂಟೀವ್ ಕೌನ್ಸಿಲ್ ಏನಿದೆ ಅದು ನಿರ್ಣಯ ಮಾಡಿದೆ. ಆ ನಿರ್ಣಯ ಅನುಷ್ಠಾನ ಆದಾಗ ನಮಗೆ ಹೆಚ್ಚಿನ ಅನುಕೂಲತೆ ಬರಬಹುದು. ಆಗ ಎಲ್ಲ ಮಿಲ್ಲುಗಳು ಪ್ರಾರಂಭವಾಗುತ್ತವೆ.

ರಾಜ್ಯದಲ್ಲಿ ಹುಡ್ಕೋ ಯೋಜನೆ

307 - ಶ್ರೀ ವಿ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಹುಡ್ಕೋ ಯೋಜನೆಯಲ್ಲಿ ಫಲಾನುಭವಿಗಳಿಗೆ ಹಣ ಪಾವತಿಸಲು ಬಾಕಿ ಇದೆಯೇ? ಇದ್ದರೆ ಎಷ್ಟು?*

ಆ) *ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?*

ಶ್ರೀ ಗೋಪಿನಾಥ್ ಆರ್. ಸಾಂಡ್ರಾ (ವಸತಿ ಸಚಿವರು) :

ಅ) ಹುಡ್ಕೋ ನೆರವಿನ ವಸತಿ ಯೋಜನೆಯು 1978-79 ರಿಂದ 1989-90ರ ವರೆಗೆ ಜಾರಿಯಲ್ಲಿತ್ತು. ಈ ಯೋಜನೆಯಡಿಯಲ್ಲಿ ಹಣವನ್ನು ಫಲಾನುಭವಿಗಳಿಗೆ ಸಂಬಂಧಪಟ್ಟ ಜಿಲ್ಲಾ ಪಂಚಾಯ್ತಿಗಳ ಮೂಲಕ ಬಿಡುಗಡೆ ಮಾಡಲಾಗುತ್ತಿತ್ತು. ಕರ್ನಾಟಕ ಗೃಹ ಮಂಡಳಿಯು ಹುಡ್ಕೋದಿಂದ ಸಾಲ ಪಡೆದು ಜಿಲ್ಲೆಗಳಿಗೆ ವಿತರಿಸಲು ಮಧ್ಯವರ್ತಿ ಸಂಸ್ಥೆಯಾಗಿದೆ. ಈ ಯೋಜನೆಯಡಿಯಲ್ಲಿ 1041.89ಲಕ್ಷ ರೂ. ಹಣವು ಫಲಾನುಭವಿಗಳಿಗೆ ಬಿಡುಗಡೆಯಾಗಬೇಕಾಗಿದೆ.

ಆ) ಈಗ ರಾಜ್ಯದಲ್ಲಿ ಆಶ್ರಯ ವಸತಿ ಯೋಜನೆ ಜಾರಿಯಲ್ಲಿರುವುದರಿಂದ ಹುಡ್ಕೋ ನೆರವಿನ ವಸತಿ ಯೋಜನೆಯಡಿಯಲ್ಲಿ ಬಾಕಿಯಿರುವ ಹಣವನ್ನು ಬಿಡುಗಡೆ ಮಾಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಅಧ್ಯಕ್ಷರೆ, ಬಡವರಿಗೆ ಹುಡ್ಕೋ ನೆರವಿನ ವಸತಿ ಯೋಜನೆ ಮೂಲಕ ಮನೆಗಳನ್ನು ಕೊಡುವ ಯೋಜನೆ 1989-90ರವರೆಗೆ ಇತ್ತು. ಈ ಸಂದರ್ಭದಲ್ಲಿ ಮನೆ ಕಟ್ಟತಕ್ಕ ಫಲಾನುಭವಿಗಳಿಗೆ ಪಾವತಿ ಆಗಲಿಕ್ಕೆ ಹತ್ತು ಕೋಟಿ 41 ಲಕ್ಷ, 87 ಸಾವಿರ ರೂಪಾಯಿ ಬಾಕಿ ಇದೆ. ಆದರೆ ಇವತ್ತು ಹುಡ್ಕೋ ಫಲಾನುಭವಿಗಳು ಮನೆಯನ್ನು ಪೂರ್ತಿ ಮಾಡುವುದಕ್ಕೆ ಆಗಿಲ್ಲ. ಕೆಲವರಿಗೆ ಎರಡು ಸಾವಿರ ರೂಪಾಯಿ ಸಿಕ್ಕಿದೆ, ಕೆಲವರಿಗೆ ನಾಲ್ಕು ಸಾವಿರ ರೂಪಾಯಿ ಸಿಕ್ಕಿದೆ, ಕೆಲವರಿಗೆ ಏನೂ ಸಿಕ್ಕಿಲ್ಲ. ಆರು ಸಾವಿರ ರೂಪಾಯಿನ ಮನೆ ಅದು. ಇವತ್ತು ಅದು ಪೂರ್ತಿಯಾಗದೆ, ಅವರಿಗೆ ಮುಂದೆ ಆಶ್ರಯ ಯೋಜನೆಯಲ್ಲಿ ಹಣ ಮಂಜೂರ್ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುವುದು ಎಂದು ಕೇಳಿದ್ದಕ್ಕೆ ರಾಜ್ಯದಲ್ಲಿ ಆಶ್ರಯ ವಸತಿ ಯೋಜನೆ ಜಾರಿಯಲ್ಲಿರುವುದರಿಂದ ಹುಡ್ಕೋ ನೆರವಿನ ವಸತಿ ಯೋಜನೆಯಲ್ಲಿ ಬಾಕಿ ಇರುವ ಹಣವನ್ನು ಬಿಡುಗಡೆ ಮಾಡಲಾಗುವುದೆಂದು ಹೇಳಿದ್ದಾರೆ. ಅವತ್ತು ಆರು ಸಾವಿರ ರೂಪಾಯಿಗಳಿಗೆ ಕಟ್ಟಿಸಿಕೊಡುತ್ತಿದ್ದ ಮನೆಯನ್ನು ಇವತ್ತು ಆರು ಸಾವಿರ ರೂಪಾಯಿಗಳಿಗೆ ಕಟ್ಟಿಸಿಕೊಡುತ್ತೀರಾ? ಈಗ ಆಶ್ರಯ ಯೋಜನೆ ಮೂಲಕ 15ಸಾವಿರ ರೂಪಾಯಿಗಳನ್ನು ಕೊಡುತ್ತೀರಾ? ಆರು ಸಾವಿರ ರೂಪಾಯಿಗಳನ್ನು ಕೊಡುವುದರಿಂದ ಏನೂ

ಪ್ರಯೋಜನವಾಗುವುದಿಲ್ಲ. 15 ಸಾವಿರ ರೂಪಾಯಿಗಳನ್ನು ಹುಡ್ಕೋ ಯೋಜನೆ ಅಡಿಯಲ್ಲಿ ಫಲಾನುಭವಿಗಳಿಗೆ ಕೊಡಬೇಕೆಂದು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಗೋಪಿನಾಥ ಆರ್. ಸಾಂದ್ರ : ಈ ಹುಡ್ಕೋ ನೆರವಿನ ಯೋಜನೆ 1978-79 ರಿಂದ 1990ರವರೆಗೆ ಏನಿತ್ತು ಅದನ್ನು ಈಗ ಬಂದ್ ಮಾಡಲಾಗಿದೆ. ಹುಡ್ಕೋನಿಂದ ಬಂದಂತ ಹಣವನ್ನು ಜಿಲ್ಲಾ ಪರಿಷತ್ತಿನ ಮೂಲಕ ನಾವು ಹುಡ್ಕೋ ಯೋಜನೆಗಾಗಿ ವಿತರಣೆ ಮಾಡಿದ್ದೇವೆ. ಇನ್ನೂ ಹತ್ತು ಕೋಟಿ ರೂಪಾಯಿ ಹಣ ಇದೆ. ಈಗ ಅರ್ಧಂಬರ್ಧ ಕೆಲಸ ಆಗಿರುವುದರಿಂದ ನಾವು ಅದನ್ನು ಪೂರ್ತಿಗೊಳಿಸುವುದಕ್ಕೆ ಆಶ್ರಯ ಯೋಜನೆ ಅಡಿಯಲ್ಲಿ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಮುಂದಿನ ಕ್ಯಾಬಿನೆಟ್ನಲ್ಲಿ ಆ ವಿಷಯ ಬರುತ್ತದೆ. ಎಂಟು ಸಾವಿರ ರೂಪಾಯಿ ಹಣ ಆಗ ಕೊಟ್ಟಿದ್ದೇವೆ, ಈಗ ಹದಿನೈದು ಸಾವಿರ ರೂಪಾಯಿ ಇದೆ. ಇದನ್ನು ಆಶ್ರಯ ಯೋಜನೆಯಲ್ಲಿ ಪರಿವರ್ತನೆ ಮಾಡಬೇಕೆಂದು ಸರ್ಕಾರ ಯೋಚಿಸಿದೆ. ಅದರ ಬಗ್ಗೆ ವಿಶೇಷ ನೋಟನ್ನು ಕ್ಯಾಬಿನೆಟ್‌ಗೆ ಕಳುಹಿಸಿ ಅದನ್ನು ಆದಷ್ಟು ಮಟ್ಟಿಗೆ ಹುಡ್ಕೋ ಯೋಜನೆಯಿಂದ ಆಶ್ರಯ ಯೋಜನೆಗೆ ಪರಿವರ್ತನೆ ಮಾಡಿ 15 ಸಾವಿರ ರೂಪಾಯಿ ಕೊಡಬೇಕೆಂದು ಆದಷ್ಟು ಬೇಗ ನಿರ್ಣಯ ಮಾಡಲಾಗುವುದು.

ನೆರೆ ಹಾವಳಿಯಿಂದ ಆಗಿರುವ ಬೆಳೆ ಹಾನಿ ಬಗ್ಗೆ

267 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) *ಇತ್ತೀಚಿನ ನೆರೆ ಹಾವಳಿಯೂ ಸೇರಿದಂತೆ ಕಳೆದ 3 ವರ್ಷಗಳಲ್ಲಿ ರಾಜ್ಯದಲ್ಲಿ ಪ್ರವಾಹ, ನೆರೆ ಹಾವಳಿ ಹಾಗೂ ಅತಿವೃಷ್ಟಿಗಳಿಂದ ಉಂಟಾಗಿರುವ ಬೆಳೆ ಹಾನಿಯ ಅಂದಾಜು ಮೊತ್ತವೆಷ್ಟು ? (ವರ್ಷವಾರು ಅಂಕಿ ಅಂಶಗಳನ್ನು ಒದಗಿಸುವುದು)*

ಆ) *ಸದರಿ ಅವಧಿಯಲ್ಲಿ ಕೇಂದ್ರ ಸರ್ಕಾರಕ್ಕೆ ಎಷ್ಟು ಮೊತ್ತದ ಪರಿಹಾರಕ್ಕಾಗಿ ಮನವಿ ಸಲ್ಲಿಸಲಾಗಿತ್ತು ? ಕೇಂದ್ರ ಸರ್ಕಾರದಿಂದ ಬಂದಿರುವ ನೆರವಿನ ಮೊತ್ತವೆಷ್ಟು ? (ವರ್ಷವಾರು ಅಂಕಿಅಂಶಗಳನ್ನು ಒದಗಿಸುವುದು)*

ಇ) *ಇದೇ ಅವಧಿಯಲ್ಲಿ ರಾಜ್ಯ ಸರ್ಕಾರವು ಎಷ್ಟು ಮೊತ್ತವನ್ನು ಪರಿಹಾರಕ್ಕಾಗಿ ಬಿಡುಗಡೆ ಮಾಡಿದೆ ?*

ಶ್ರೀ ಧರ್ಮಸಿಂಗ್ (ಕಂದಾಯ ಸಚಿವರು) :

ಅ) ರಾಜ್ಯದಲ್ಲಿ ಪ್ರವಾಹ, ನೆರೆಹಾವಳಿ ಹಾಗೂ ಅತಿವೃಷ್ಟಿಯಿಂದ ಕಳೆದ ಮೂರು ವರ್ಷದಲ್ಲಿ ಆಗಿರುವ ಕೃಷಿ ಬೆಳೆ ಹಾನಿಯ ವಿವರಗಳು ಈ ಕೆಳಕಂಡಂತಿವೆ -

ವರ್ಷ	ಬೆಳೆ ಹಾನಿ (ಲಕ್ಷ ಹೆಕ್ಟೇರ್ ಗಳಲ್ಲಿ)	ಅಂದಾಜು ಹಾನಿಯ ಮೊತ್ತ (ಲಕ್ಷ ರೂ.ಗಳಲ್ಲಿ)
1991-92	1.75	2153.79
1992-93	3.132	14046.62
1993-94	2.977	11622.88
1994-95	1.57	6302.67
	ಒಟ್ಟು	34125.96

ಆ) ನೆರೆ ಪರಿಹಾರ ಕಾರ್ಯಗಳಿಗೆ ಕೇಂದ್ರದ ನೆರವನ್ನು ಕೋರಿ ಸಲ್ಲಿಸಲಾದ ಮನವಿ ಪತ್ರಗಳ ವಿವರ ಕೆಳಕಂಡಂತಿದೆ-